## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಎಲಿವೇಟಡ್ ಕಾರಿಡಾರ್ ನಿರ್ಮಾಣ.

ಓದಲಾಗಿದೆ:-1) ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಪತ್ರ ACS:361:UDD:2015, ದಿನಾಂಕ 28-09-2015.

2) ಸರ್ಕಾರದ ಪತ್ರ ಸಂಖ್ಯೆ:ಲೋಇ 94 ಸಿಆರ್‌ಎಂ 2015, ದಿನಾಂಕ 01-10-2015.

3) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಪತ್ರ ಸಂಖ್ಯೆ:ಕರಅನಿನಿ:ವ್ಯನಿ: ಎಲಿವೇಟೆಡ್ ಕಾರಿಡಾರ್:2018-19:2567, ದಿನಾಂಕ 21-11-2018.

4) State Level Environment Impact Assessment Authority-Karnataka ರವರ ಪತ್ರ ಸಂಖ್ಯೆ:SEIAA 135 CON 2018, ದಿನಾಂಕ 02-03-2019.

---

**ಪ್ರಸ್ತಾವನೆ:-**

ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ವಾಹನ ಸಂಚಾರ ದಟ್ಟಣೆಯನ್ನು ಮಿತಿಗೊಳಿಸಿ ಅಡೆತಡೆಯಿಲ್ಲದ ಸುಗಮ ವಾಹನ ಸಂಚಾರಕ್ಕಾಗಿ ಸುಧಾರಿತ ರಸ್ತೆ ಸುರಕ್ಷತೆಯನ್ನು ಪರಿಗಣಿಸಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣದ ಕುರಿತು ಸನ್ಮಾನ್ಯ ಮುಖ್ಯ ಮಂತ್ರಿಯವರು ಜುಲೈ-2018 ಹಾಗೂ ಫೆಬ್ರವರಿ 2019 ರ ಆಯವ್ಯಯ ಭಾಷಣದಲ್ಲಿ ಘೋಷಿಸಿದ್ದು, ಆಯವ್ಯಯದಲ್ಲಿ ರೂ. 1000 ಕೋಟಿಯನ್ನು ಯೋಜನೆಯ ಅನುಷ್ಠಾನಕ್ಕಾಗಿ ನಿಗದಿಪಡಿಸಿದೆ.

ಈ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವ ಪ್ರಸ್ತಾವನೆ ಕುರಿತು ಓದಲಾದ (1) ರ ಪತ್ರದಲ್ಲಿ ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ನಗರದಲ್ಲಿ ಆಯ್ಕೆಯಾದ ರಸ್ತೆಗಳಿಗೆ ವಿಸ್ತೃತ ಕಾರ್ಯ ಸಾಧ್ಯತಾ ವರದಿಯನ್ನು ತಯಾರಿಸಲು ರೂ.14.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಸದರಿ ಪ್ರಸ್ತಾವನೆಯನ್ನು ಅಭ್ಯಸಿಸಿ ವರದಿ ಸಲ್ಲಿಸಲು ಓದಲಾದ (2) ರ ಪತ್ರದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಸೂಚಿಸಿದೆ.

ಅದರಂತೆ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ದಿನಾಂಕ: 22-03-2016 ರಂದು ಮೆ॥ ಏಇಕಾಂ ಏಷಿಯಾ ಕಂ. ಲಿ ಗುಡಗಾಂವ್, ಹರಿಯಾಣ (ಮೆ॥ ಏಇಕಾಂ ಏಷಿಯಾ ಕಂ. ಲಿ, ಇನ್ಫ್ರಾ ಸಪೋರ್ಟ್ ಇಂಜಿನಿಯರಿಂಗ್ ಪ್ರೈ.ಲಿ ಮತ್ತು ಡೆಲ್ಲಾಯ್ಟ್ಸ್ ಸಹಯೋಗ) ರವರಿಗೆ ಸಲಹೆಗಾರರಾಗಿ ನೇಮಿಸಿ ಸಲಹಾ ಕಾರ್ಯವನ್ನು ವಹಿಸಿದ್ದು, ಸದರಿಯವರು ವಿವರವಾಗಿ ಅಭ್ಯಸಿಸಿ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ ಸಂಚಾರ ದಟ್ಟಣೆಯನ್ನು ಮಿತಿಗೊಳಿಸಲು ಕೆಳಗೆ ಸೂಚಿಸಿರುವ ಸಂಭಾವ್ಯ ಎಲಿವೇಟೆಡ್ ಕಾರಿಡಾರ್‌ಗಳನ್ನು ಗುರುತಿಸಿ ಕರಡು ಕಾರ್ಯ ಸಾಧ್ಯತಾ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆ ಕುರಿತು ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಇವರೊಂದಿಗೆ ವಿವಿಧ ಹಂತಗಳಲ್ಲಿ ಅನೇಕ ಸಭೆಗಳನ್ನು ಏರ್ಪಡಿಸಿ ವಿಷಯಗಳನ್ನು ಪರಾಮರ್ಶಿಸಿ ವಿವರವಾದ ಪರಿಶೀಲನೆ ಮತ್ತು ಸಮಾಲೋಚಕರೊಂದಿಗೆ (ಸ್ಟೇಕ್ ಹೋಲ್ಡರ್ಸ್) ಸಮಾಲೋಚಿಸಿದ ನಂತರ ಸಲಹೆಗಾರರು ನೀಡಿರುವ ಯೋಜನಾ ವಿವರ ಈ ಕೆಳಕಂಡಂತಿವೆ.

| ಕ್ರ ಸಂ | ಅನುಷ್ಠಾನ ಹಂತ | ಕಾರಿಡಾರ್ ಹೆಸರು | ಪಥ ಸಂಚಲನೆ | ಒಟ್ಟು ಉದ್ದ (ಕಿ.ಮೀ) | ಒಟ್ಟು ಯೋಜನಾ ಮೊತ್ತ |
|---|---|---|---|---|---|
| 1 | ಹಂತ-I | **ಉತ್ತರ - ದಕ್ಷಿಣ ಕಾರಿಡಾರ್ (ಎನ್.ಎಸ್) :** ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಸೆಂಟ್‌ಜಾನ್ಸ್ ಆಸ್ಪತ್ರೆಯಿಂದ ಹೊರವರ್ತುಲ ರಸ್ತೆಯಲ್ಲಿ ಅಗರ ಜಂಕ್ಷನ್ ಸಂಧಿಸುವ ಸಂಪರ್ಕ ಕಾರಿಡಾರ್ : (ಸಿಸಿ-1) ವರೆಗೆ – ಮೇಖ್ರಿ ಸರ್ಕಲ್ ಜಯಮಹಲ್ ಮುಖ್ಯರಸ್ತೆ, ಕಂಟೋನ್ಮೆಂಟ್ ಲೂಪ್ – ಕ್ವೀನ್ಸ್ ರಸ್ತೆ – ಮಿನ್ಸ್ ಚೌಕ, ಕಸ್ತೂರಬಾ ರಸ್ತೆ, ವಿಠ್ಠಲ್‌ಮಲ್ಯ ಮುಖ್ಯ ರಸ್ತೆ - ರಿಚ್‌ಮಂಡ್ ರಸ್ತೆ – ಕೆ.ಹೆಚ್.ರಸ್ತೆ– ಬಿ.ಜಿ.ಎಸ್ ರಸ್ತೆ - ಬಾಷ್ ಮತ್ತು ಎನ್‌ಡಿಆರ್‌ಐ ಆವರಣ– ಆಡುಗೋಡಿ– ಹೊಸೂರು ರಸ್ತೆ - ಸೇಂಟ್‌ಜಾನ್ಸ್ ಆಸ್ಪತ್ರೆ ಜಂಕ್ಷನ್ – ಮಡಿವಾಳ ಜಂಕ್ಷನ್ – ಸೆಂಟ್ರಲ್ ಸಿಲ್ಕ್‌ಬೋರ್ಡ್.<br>**ಸಂಪರ್ಕ ಕಾರಿಡಾರ್ (ಸಿಸಿ) – 1:** ಸೆಂಟ್‌ಜಾನ್ಸ್ ಆಸ್ಪತ್ರೆಯಿಂದ ಒಳವರ್ತುಲ ರಸ್ತೆಯ ನ್ಯೂ ಜಂಕ್ಷನ್ ಛೇದಿಸಿ – ಕೃಪಾನಿಧಿ ಕಾಲೇಜು ಜಂಕ್ಷನ್ ಮೂಲಕ ಅಗರ ಸಂಪರ್ಕಿಸುವುದು (ವರ್ತುಲ ರಸ್ತೆ)<br>**ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ (ಸಿಬಿಡಿ) ಲೂಪ್:** ಕೆ.ಹೆಚ್ ರಸ್ತೆಯಿಂದ ಲಾಲ್‌ಬಾಗ್ ಗೇಟ್ – ಮಿನರ್ವ ವೃತ್ತ – ಜೆ.ಸಿ.ರಸ್ತೆಯಿಂದ ಕೆ.ಹೆಚ್.ರಸ್ತೆಯನ್ನು ಚಾಮರಾಜಪೇಟೆ ಒಂದನೇ ಕ್ರಾಸ್ ರಸ್ತೆ, ಸುಬ್ಬಯ್ಯ ವೃತ್ತ, ಹಡ್ಸನ್ ವೃತ್ತ ಮೂಲಕ ರಾಜಾರಾಮ್ ಮೋಹನ್ ರಾಯ್ ತಲುಪುವುದು. | 6 ಪಥ / 6 ಪಥ Multi Level<br>4 ಪಥ<br>3/4 ಪಥ | 32.25 | 9099.14 |
| 2 | ಹಂತ-II | **ಪೂರ್ವ-ಪಶ್ಚಿಮ ಕಾರಿಡಾರ್-1 (ಇಡಬ್ಲ್ಯೂ -1) ಆರ್.ಎಂ.ಝಡ್ ನಿಂದ ಯಶವಂತಪುರ** ವರೆಗೆ, ಸುರಂಜನ್‌ದಾಸ್ ರಸ್ತೆ ಜಂಕ್ಷನ್ – ಇಂದಿರಾನಗರ 100 ಅಡಿ ರಸ್ತೆ ಜಂಕ್ಷನ್ – ಕೆನ್ಸಿಂಗ್ಟನ್ ರಸ್ತೆ ಜಂಕ್ಷನ್. ಸೇಂಟ್ ಜಾನ್ಸ್ ರಸ್ತೆ – ಮಿಲ್ಲರ್ಸ್ ರಸ್ತೆ – ಜಯಮಹಲ್ ಮುಖ್ಯ ರಸ್ತೆ, – ಮೇಖ್ರಿ ವೃತ್ತ – ಸಿ.ವಿ. ರಾಮನ್ ರಸ್ತೆ ಮೂಲಕ ಯಶವಂತಪುರ ಮೇಲ್ಸೇತುವೆಯಲ್ಲಿ ವಿಲೀನಗೊಳ್ಳುವುದು. **ಸಂಪರ್ಕ ಕಾರಿಡಾರ್-2 (ಸಿಸಿ-2):** ಡಿ.ಸೋಜಾ ವೃತ್ತದಿಂದ ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ - ಟ್ರಿನಿಟಿ ಜಂಕ್ಷನ್ ಮತ್ತು ಹಲಸೂರು ಜಂಕ್ಷನ್ ಮೂಲಕ ಹಲಸೂರು ವರೆಗೆ .<br>**ಸಂಪರ್ಕ ಕಾರಿಡಾರ್ -3 (ಸಿಸಿ-3):** ಪೂರ್ವ-ಪಶ್ಚಿಮ ಕಾರಿಡಾರ್ – 1 ರಲ್ಲಿ ವೀಲ್ಲರ್ಸ್ ರಸ್ತೆ ಜಂಕ್ಷನ್‌ನಿಂದ ಲಿಂಗರಾಜಪುರಂ ಮುಖ್ಯ ರಸ್ತೆ ಜಂಕ್ಷನ್ ಮೂಲಕ ಹೊರವರ್ತುಲ ರಸ್ತೆಯ ಹೆಣ್ಣೂರು ಜಂಕ್ಷನ್ ಸಂಪರ್ಕಿಸುವುದು. | 4 ಪಥ | 16.67 | 6503.62 |
| 3 | ಹಂತ-3 | **ಪೂರ್ವ-ಪಶ್ಚಿಮ ಕಾರಿಡಾರ್ -2 (ಇಡಬ್ಲ್ಯೂ-2) ವರ್ತೂರು ಕೋಡಿಯಿಂದ** ಹಳೆ ವಿಮಾನ ನಿಲ್ದಾಣ ರಸ್ತೆ –ಡಿ.ಸೋಜಾ ವೃತ್ತ – ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ – ವೆಲ್ಲಾರ ಜಂಕ್ಷನ್ – ರಿಚ್‌ಮಂಡ್ ವೃತ್ತ – ಕೆ.ಹೆಚ್.ರಸ್ತೆ - ಲಾಲ್‌ಬಾಗ್ ಮುಖ್ಯ ರಸ್ತೆ - ಮಿನರ್ವ ಜಂಕ್ಷನ್ – ಚಾಮರಾಜಪೇಟೆಯ 7ನೇ ಕ್ರಾಸ್ – 1ನೇ ಮೇನ್ ರಸ್ತೆಯ ಮೂಲಕ ಸಿರ್ಸಿ ವೃತ್ತದವರೆಗೆ. | 4 ಪಥ | 27.95 | 7450.02 |
| 4 | ಹಂತ-4 | **ಪೂರ್ವ-ಪಶ್ಚಿಮ -1 ಎ:** ರಾಮಮೂರ್ತಿನಗರ (ಒಆರ್‌ಆರ್) ಒಆರ್‌ಆರ್ ನಲ್ಲಿರುವ ಅಂಡರ್‌ಪಾಸ್‌ನಿಂದ ರಾಮಮೂರ್ತಿನಗರ ರಸ್ತೆ ಮತ್ತು ಐ.ಟಿ.ಐ ಆವರಣದ ಮೂಲಕ ಐ.ಟಿ.ಪಿ.ಎಲ್ ವರೆಗೆ ಹೆಚ್ಚುವರಿ ಕಾರಿಡಾರ್. | 4 ಪಥ | 11.00 | 3905.93 |
| | | | ಒಟ್ಟು | **87.87** | **26958.72** |

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಈ ಯೋಜನೆಯಲ್ಲಿ ಒಟ್ಟು 5 ಸಂಗ್ರಹಣಾ ಮಾದರಿಯನ್ನು ಅಧ್ಯಯನ ಮಾಡಿ ಅವುಗಳ ಅಳವಡಿಕೆಗಳ ಸಾಧ್ಯತೆ ಬಗ್ಗೆ ವರದಿ ನೀಡಿರುತ್ತಾರೆ ಹಾಗೂ ವರದಿಯಲ್ಲಿ ತಿಳಿಸಿದಂತೆ ಯೋಜನೆಯನ್ನು 4 ಹಂತಗಳಲ್ಲಿ ಕೈಗೊಳ್ಳಲು ಹಾಗೂ ಹಂತ-1ರ

ಯೋಜನೆಯನ್ನು ಇಪಿಸಿ ಮಾದರಿಯಲ್ಲಿ ಕೈಗೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ, ಹಂತ-1ರ ಯೋಜನೆಯ ಅನುಷ್ಠಾನ ವಿವರ ಕೆಳಕಂಡಂತಿದೆ:

| ಪ್ಯಾಕೇಜುಗಳು | ಭಾಗಗಳು | ಉದ್ದ | ನಿರ್ಮಾಣ ಮೊತ್ತ. ರೂ.ಕೋಟಿಗಳಲ್ಲಿ |
|---|---|---|---|
| ಎನ್.ಎಸ್ ಪ್ಯಾಕೇಜು-1 | a) ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ ಮೇಖ್ರಿ ಮತ್ತು ಕಾವೇರಿ ಜಂಕ್ಷನ್<br>b) ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ | 8.43 | 2968.81 |
| ಎನ್.ಎಸ್ ಪ್ಯಾಕೇಜು-2 | a) ಕಂಟೋನ್ಮೆಂಟ್ ಲೂಪ್<br>b) ಕಂಟೋನ್ಮೆಂಟ್ ನಿಂದ ವಿಠ್ಠಲ್ ಮಲ್ಯ ಜಂಕ್ಷನ್<br>c) ವಿಠ್ಠಲ್ ಮಲ್ಯ ಜಂಕ್ಷನ್‌ನಿಂದ ಶಾಂತಿನಗರ ಬಸ್ ನಿಲ್ದಾಣ | 7.42 | 1760.10 |
| ಎನ್.ಎಸ್ ಪ್ಯಾಕೇಜು-3 | a) ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಲೂಪ್ | 6.25 | 1419.50 |
| ಎನ್.ಎಸ್ ಪ್ಯಾಕೇಜು-4 | a) ಶಾಂತಿನಗರ ದಿಂದ ಸಿಲ್ಕ್ ಬೋರ್ಡ್ ವರೆಗೆ<br>b) ಸೆಂಟ್ ಜಾನ್ಸ್ ಆಸ್ಪತ್ರೆ ಜಂಕ್ಷನ್ ನಿಂದ ಅಗರ ಹೊರ ವರ್ತುಲ ರಸ್ತೆ- ಸಿಸಿ-1 | 10.15 | 2950.73 |
| | **ಹಂತ – 1 ಒಟ್ಟು** | **32.25** | **9099.14** |

ಈ ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಹಾಗೂ ಆರ್ಥಿಕ ಇಲಾಖೆಗಳೊಂದಿಗೆ ಸಮಾಲೋಚಿಸಲಾಗಿದ್ದು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 149 ಆಕೋ-1 2019 ದಿನಾಂಕ 21-02-2019 ರಲ್ಲಿ ಈ ಕೆಳಗಿನಂತೆ ಸಹಮತಿ ನೀಡಿರುತ್ತದೆ.

(1) ಅಂದಾಜು ಮೊತ್ತ ರೂ.26,690 ಕೋಟಿಗಳ ವೆಚ್ಚದಲ್ಲಿ 87.87 ಕಿಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಯೊಜನೆಯನ್ನು ಕೈಗೆತ್ತಿಕೊಳ್ಳಲು ತಾತ್ವಿಕ ಅನುಮೋದನೆ ನೀಡಿದೆ.

(2) ಮೊದಲನೇ ಹಂತದಲ್ಲಿ ಈ ಕೆಳಕಂಡಂತೆ 3 ಪ್ಯಾಕೇಜುಗಳಲ್ಲಿ ಒಟ್ಟು 21.54 ಕಿಮೀ ಉದ್ದದ North-South Corridor ಕಾಮಗಾರಿಯನ್ನು ಅಂದಾಜು ಮೊತ್ತ ರೂ.6855.00 ಕೋಟಿಗಳ ವೆಚ್ಚದಲ್ಲಿ ತೆಗೆದುಕೊಳ್ಳಲು ಸಹಮತಿಸಿದೆ.

| ಕ್ರ. ಸಂ. | ಪ್ಯಾಕೇಜ್ ಸಂಖ್ಯೆ ಮತ್ತು ವಿವರಗಳು | ರಸ್ತೆಯ ಉದ್ದ | ಒಟ್ಟು ಮೊತ್ತ (ನಿರ್ಮಾಣ ಭೂಸ್ವಾಧೀನ, Utility Shifting ಮತ್ತು ಇತರ ವೆಚ್ಚ ಸೇರಿದಂತೆ) |
|---|---|---|---|
| 1 | ಪ್ಯಾಕೇಜ್-1<br>a. Baptist Hospital to Kaveri Junction<br>b. Mekhri Circle to cantonment | 8.42 ಕಿ.ಮೀ | **ರೂ 6855.00 ಕೋಟಿ** |
| 2 | ಪ್ಯಾಕೇಜ್-2<br>a. Cantonment loop<br>b. Cantonment Vittal Malya Junction<br>c. Vittal Malya junction to Shanthi Nagar Bus Station | 7.42 ಕಿ.ಮೀ | |
| 3 | ಪ್ಯಾಕೇಜ್-4 (Part –a)<br>a. Shanthinagar to Silk Board | 5.70 ಕಿ.ಮೀ | |

ಎಲಿವೇಟೆಡ್ ಕಾರಿಡಾರ್ ಯೋಜನೆಯ ಹಂತ-1ರ ಯೋಜನೆಗೆ ಬೇಕಾದ ಭೂಸ್ವಾಧೀನ ಕುರಿತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಯೋಜನಾ ವರದಿಯಲ್ಲಿ ವಿವರಿಸಿರುತ್ತಾರೆ. ಉತ್ತರ-ದಕ್ಷಿಣ ಕಾರಿಡಾರ್‌ಗಳು ಸೇನಾ ಜಮೀನು-ವಾಯುಪಡೆ, ರೈಲ್ವೇ ಇಲಾಖೆ,

ಲೋಕೋಪಯೋಗಿ ಇಲಾಖೆ, ಮೆ॥ ಬಾಷ್, ನ್ಯಾಷನಲ್ ಡೈರಿ ರಿಸರ್ಚ್ ಇನ್‌ಸ್ಟಿಟ್ಯೂಟ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ನ್ಯೂಟ್ರಿಷನ್ ಅಂಡ್ ಫಿಸಿಯೋಲಜಿ ಹಾಗೂ ಸೆಂಟ್ ಜಾನ್ಸ್ ಇನ್ಸ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಮೂಲಕ ಹಾದು ಹೋಗುತ್ತಿದ್ದು, ಹಸ್ತಾಂತರಿಸಿಕೊಳ್ಳಲು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರೊಡನೆ ವ್ಯವಹರಿಸಿ ಕ್ರಮ ವಹಿಸಲಾಗುತ್ತಿದೆ.

ಸರ್ಕಾರವು ಎಲಿವೇಟೆಡ್ ಕಾರಿಡಾರ್ ನಿರ್ಮಾಣದಲ್ಲಿ ಭಾಗೀದಾರರಾದ (Stake holders) ಬಿಡಿಎ, ಬಿಬಿಎಂಪಿ, ಬೆಂಗಳೂರು ನಗರ ಪೋಲಿಸ್, ಬಿಎಂಆರ್‌ಸಿಎಲ್, ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಡೆಲ್ಟ್, ಸಾರಿಗೆ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರದಲ್ಲಿ ಪ್ರತಿಷ್ಠಿತ ಸಂಸ್ಥೆಗಳಾದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ (CiSTUP) ನ ನಿರ್ದೇಶಕರು, ನಗರ ಯೋಜನೆ ಮತ್ತು ಸಂಚಾರ ತಜ್ಞರು ಇತರರೊಂದಿಗೆ ಚರ್ಚಿಸಿ ಮತ್ತು ಸಮಾಲೋಚಿಸಿ, ಅವರುಗಳು ನೀಡಿರುವ ಸಲಹೆ ಮತ್ತು ಅಭಿಪ್ರಾಯಗಳನ್ನು ಪರಿಗಣಿಸಿ ಯೋಜನೆಯಲ್ಲಿ ಅವಶ್ಯವಿರುವ ಕಡೆ ಇವುಗಳನ್ನು ಸೂಕ್ತವಾಗಿ ಅಳವಡಿಸಲಾಗಿದೆ.

State Level Environmental Impact Assessment Authority (SEIAA) – Karnataka ರವರು ದಿನಾಂಕ 02-03-2019 ರಂದು ನಡೆದ ಸಭೆಯಲ್ಲಿ State Level Expert Appraisal Committee (SEAC) ಯ ಶಿಫಾರಸ್ಸುಗಳನ್ನು ಆಧಾರಿಸಿ, Environmental Impact Assessment Notification 2006 ರಲ್ಲಿನ ನಿಬಂಧನೆಗಳ ಅನ್ವಯ ಹಲವಾರು ಷರತ್ತುಗಳನ್ನು ಅಳವಡಿಸಿ ಈ ಕೆಳಕಂಡ ವಿಶೇಷ ಷರತ್ತುಗಳಾದ ಸ್ಥಳಾಂತರಿಸಬಹುದಾದ ಮರಗಳ ಸ್ಥಳಾಂತರ, ಸಂರಕ್ಷಿತ ಪ್ರದೇಶದ ವಲಯದಲ್ಲಿ ಬರುವ ಪುರಾತತ್ವ ಮಹತ್ವವುಳ್ಳ ಕಟ್ಟಡಗಳ ಸಂರಕ್ಷಣೆ, ಸಂಸ್ಕರಣಾ ಘಟಕದ ಮೂಲಕ ಸಂಸ್ಕರಿಸಲ್ಪಟ್ಟ ನೀರನ್ನು ಮಾತ್ರ ಯೋಜನೆ ಕಾಮಗಾರಿಯಲ್ಲಿ ಬಳಸುವುದು, ಕಾರಿಡಾರ್‌ಗಳ ಭಾಗಗಳಲ್ಲಿ ಗುಡಿಸುವ ಯಂತ್ರಗಳ ಬಳಕೆ, ಕ್ಲಿಷ್ಟಕರ ಜಂಕ್ಷನ್‌ಗಳಲ್ಲಿ ಗಾಳಿ ಶುದ್ಧೀಕರಣ ಉಪಕರಣ ಅಳವಡಿಸಲು ಮತ್ತು ಕಾರ್ಬನ್ ಹೀರುವ ಸಾಧನೆಗಳ ಅನ್ವೇಷಣೆ, ರಸ್ತೆ ಮೀಡಿಯನ್‌ನಲ್ಲಿ ನೆಡಬಹುದಾದ ಸೂಕ್ತ ಸಸಿಗಳನ್ನು ಗುರುತಿಸುವುದು, ಸುಗಮ ವಾಹನ ಸಂಚಾರಕ್ಕೆ ಅನುವು ಮಾಡುವುದು ಮತ್ತು ಬಫರ್ ವಲಯವನ್ನು NGT ರವರು ನಿಗಧಿಮಾಡಿರುವ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸುವ ಷರತ್ತುಗಳಿಗೆ ಒಳಪಟ್ಟು ಯೋಜನೆಗೆ ಪರಿಸರ ನಿರಾಪೇಕ್ಷಣಾ ಪತ್ರ (Environmental Clearance) ನೀಡಿದೆ.

**ಈ ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಇಲಾಖೆ ಹಾಗೂ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಆ ಇಲಾಖೆಗಳ ಅಭಿಪ್ರಾಯವನ್ನು ಪಡೆಯಲಾಗಿದೆ. ಒಟ್ಟಾರೆಯಾಗಿ ಸರ್ಕಾರವು ಈ ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.**

**ಸರ್ಕಾರದ ಆದೇಶ ಸಂಖ್ಯೆ:ಲೋಇ 215 ಇಎಪಿ 2018 (P1) ಬೆಂಗಳೂರು, ದಿನಾಂಕ 02-03-2019**

(i) ಈ ಎಲಿವೇಟೆಡ್ ಕಾರಿಡಾರ್‌ನ ಯೊಜನೆಯಡಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗಳನ್ನು ಬಿ.ಎಂ.ಆರ್.ಡಿ.ಎ ಯವರ ಸಿ.ಡಿ.ಪಿ (CDP) ಮತ್ತು ಸಿ.ಟಿ.ಟಿ.ಪಿ (CTTP) ದಾಖಲೆಗಳಲ್ಲಿ ಅಳವಡಿಸಲು ಅನುಮೋದನೆ ನೀಡಲಾಗಿದೆ.

(ii) ಈ ಕೆಳಗೆ ನಮೂದಿಸಿರುವ ಎಲ್ಲಾ ಎಲಿವೇಟೆಡ್ ಕಾರಿಡಾರ್‌ಗಳನ್ನು ಒಳಗೊಂಡ ಸಂಪೂರ್ಣ ಯೋಜನೆಗೆ ತಾತ್ವಿಕ ಅನುಮೋದನೆ ನೀಡಲಾಗಿದೆ.

| ಅನುಷ್ಠಾನ ಹಂತ | ಕಾರಿಡಾರ್ ಹೆಸರು | ಪಥ ಸಂಚಲನೆ | ಒಟ್ಟು ಉದ್ದ (ಕಿ.ಮೀ) | ಒಟ್ಟು ಕಾಮಗಾರಿ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|---|
| ಹಂತ–I | **ಉತ್ತರ – ದಕ್ಷಿಣ ಕಾರಿಡಾರ್ (ಎನ.ಎಸ್) :** ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಸೆಂಟ್‌ಜಾನ್ಸ್ ಆಸ್ಪತ್ರೆಯಿಂದ ಹೊರವರ್ತುಲ ರಸ್ತೆಯಲ್ಲಿ ಅಗರ ಜಂಕ್ಷನ್ ಸಂಧಿಸುವ ಸಂಪರ್ಕ ಕಾರಿಡಾರ್ : (ಸಿಸಿ–1) ವರೆಗೆ – ಮೇಖ್ರಿ ಸರ್ಕಲ್ ಜಯಮಹಲ್ ಮುಖ್ಯರಸ್ತೆ, ಕಂಟೋನ್ಮೆಂಟ್ ಲೂಪ್ – ಕ್ವೀನ್ಸ್ ರಸ್ತೆ – ಮಿನ್ಸ್ ಚೌಕ, ಕಸ್ತೂರಬಾ ರಸ್ತೆ, ವಿಠ್ಠಲ್‌ಮಲ್ಯ ಮುಖ್ಯ ರಸ್ತೆ – ರಿಚ್‌ಮಂಡ್ ರಸ್ತೆ – ಕೆ.ಹೆಚ್.ರಸ್ತೆ–ಬಿ.ಜಿ.ಎಸ್ ರಸ್ತೆ – ಬಾಷ್ ಮತ್ತು ಎನ್‌ಡಿಆರ್‌ಐ ಆವರಣ–ಆಡುಗೋಡಿ– ಹೊಸೂರು ರಸ್ತೆ – ಸೇಂಟ್‌ಜಾನ್ಸ್ ಆಸ್ಪತ್ರೆ ಜಂಕ್ಷನ್ – ಮಡಿವಾಳ ಜಂಕ್ಷನ್ – ಸೆಂಟ್ರಲ್ ಸಿಲ್ಕ್‌ಬೋರ್ಡ್.<br>**ಸಂಪರ್ಕ ಕಾರಿಡಾರ್ (ಸಿಸಿ) – 1** ಸೆಂಟ್‌ಜಾನ್ಸ್ ಆಸ್ಪತ್ರೆಯಿಂದ ಒಳವರ್ತುಲ ರಸ್ತೆಯ ನ್ಯೂ ಜಂಕ್ಷನ್ ಛೇದಿಸಿ – ಕೃಪಾನಿಧಿ ಕಾಲೇಜು ಜಂಕ್ಷನ್ ಮೂಲಕ ಅಗರ ಸಂಪರ್ಕಿಸುವುದು (ವರ್ತುಲ ರಸ್ತೆ)<br>**ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ (ಸಿಬಿಡಿ) ಲೂಪ್:** ಕೆ.ಹೆಚ್ ರಸ್ತೆಯಿಂದ ಲಾಲ್‌ಬಾಗ್ ಗೇಟ್ – ಮಿನರ್ವ ವೃತ್ತ – ಜೆ.ಸಿ.ರಸ್ತೆಯಿಂದ–ಹಡ್ಸನ್ ವೃತ್ತ – ರಾಜಾರಾಮ್‌ಮೋಹನ್ ರಾಯ್ ರಸ್ತೆ – ರಿಚ್ ಮಂಡ್ ವೃತ್ತ – ಕೆ.ಹೆಚ್ ರಸ್ತೆ – ಮುಂದುವರೆದು, ಲಿಂಕ್ ರಸ್ತೆ ಜೆ.ಸಿ. ರಸ್ತೆಯಿಂದ ಕೆ.ಹೆಚ್ ರಸ್ತೆ ವರೆಗೆ ಕಾಳಿಂಗ ರಸ್ತೆ ಹಾಗೂ ಸಿದ್ದಯ್ಯ ವೃತ್ತ ಮುಖಾಂತರ. | 6 ಪಥ / 6 ಪಥ ವಿವಿಧ ಎತ್ತರದಲ್ಲಿ<br>4 ಪಥ<br>3/4 ಪಥ | 32.25 | 9100 |
| ಹಂತ–II | **ಪೂರ್ವ–ಪಶ್ಚಿಮ ಕಾರಿಡಾರ್–1 (ಇಡಬ್ಲ್ಯೂ –1) ಆರ್.ಎಂ.ಝಡ್ ನಿಂದ ಯಶವಂತಪುರ** ವರೆಗೆ, ಸುರಂಜನ್‌ದಾಸ್ ರಸ್ತೆ ಜಂಕ್ಷನ್ – ಇಂದಿರಾನಗರ 100 ಅಡಿ ರಸ್ತೆ ಜಂಕ್ಷನ್ – ಕೆನ್ನಿಂಗ್ಟನ್ ರಸ್ತೆ ಜಂಕ್ಷನ್, ಸೇಂಟ್ ಜಾನ್ಸ್ ರಸ್ತೆ – ಮಿಲ್ಲರ್ಸ್ ರಸ್ತೆ – ಜಯಮಹಲ್ ಮುಖ್ಯ ರಸ್ತೆ, – ಮೇಖ್ರಿ ವೃತ್ತ – ಸಿ.ವಿ. ರಾಮನ್ ರಸ್ತೆ ಮೂಲಕ ಯಶವಂತಪುರ ಮೇಲ್ಸೇತುವೆಯಲ್ಲಿ ವಿಲೀನಗೊಳ್ಳುವುದು.<br>**ಸಂಪರ್ಕ ಕಾರಿಡಾರ್–2 (ಸಿಸಿ–2):** ಡಿ.ಸೋಜಾ ವೃತ್ತದಿಂದ ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ – ಟ್ರಿನಿಟಿ ಜಂಕ್ಷನ್ ಮತ್ತು ಹಲಸೂರು ಜಂಕ್ಷನ್ ಮೂಲಕ ಹಲಸೂರು ವರೆಗೆ.<br>**ಸಂಪರ್ಕ ಕಾರಿಡಾರ್ –3 (ಸಿಸಿ–3):** ಪೂರ್ವ–ಪಶ್ಚಿಮ ಕಾರಿಡಾರ್–1 ರಲ್ಲಿ ವೀಲ್ಲರ್ಸ್ ರಸ್ತೆ ಜಂಕ್ಷನ್‌ನಿಂದ ಲಿಂಗರಾಜಪುರಂ ಮುಖ್ಯ ರಸ್ತೆ ಜಂಕ್ಷನ್ ಮೂಲಕ ಹೊರವರ್ತುಲ ರಸ್ತೆಯ ಹೆಣ್ಣೂರು ಜಂಕ್ಷನ್ ಸಂಪರ್ಕಿಸುವುದು. | 4 ಪಥ | 16.67 | 6504 |
| ಹಂತ–III | **ಪೂರ್ವ–ಪಶ್ಚಿಮ ಕಾರಿಡಾರ್ –2 (ಇಡಬ್ಲ್ಯೂ–2) ವರ್ತೂರು ಕೋಡಿಯಿಂದ** ಹಳೆ ವಿಮಾನ ನಿಲ್ದಾಣ ರಸ್ತೆ –ಡಿ.ಸೋಜಾ | | | |

| | | | | |
|---|---|---|---|---|
| | ವೃತ್ತ – ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ – ವೆಲ್ಲಾರ ಜಂಕ್ಷನ್ – ರಿಚ್‌ಮಂಡ್ ವೃತ್ತ – ಕೆ.ಹೆಚ್.ರಸ್ತೆ – ಲಾಲ್‌ಬಾಗ್ ಮುಖ್ಯ ರಸ್ತೆ – ಮಿನರ್ವ ಜಂಕ್ಷನ್ – ಚಾಮರಾಜಪೇಟೆಯ 7ನೇ ಕ್ರಾಸ್ – 1ನೇ ಮೇನ್ ರಸ್ತೆಯ ಮೂಲಕ ಸಿರ್ಸಿ ವೃತ್ತದವರೆಗೆ. | 4 ಪಥ | 27.95 | 7450 |
| ಹಂತ– IV | ಪೂರ್ವ–ಪಶ್ಚಿಮ –1 ಎ: ರಾಮಮೂರ್ತಿನಗರ (ಒಆರ್‌ಆರ್) ಒಆರ್‌ಆರ್ ನಲ್ಲಿರುವ ಅಂಡರ್‌ಪಾಸ್‌ನಿಂದ ರಾಮಮೂರ್ತಿನಗರ ರಸ್ತೆ ಮತ್ತು ಐ.ಟಿ.ಐ ಆವರಣದ ಮೂಲಕ ಐ.ಟಿ.ಪಿ.ಎಲ್ ವರೆಗೆ ಹೆಚ್ಚುವರಿ ಕಾರಿಡಾರ್. | 4 ಪಥ | 11.00 | 3906 |
| | **ಒಟ್ಟು** | | **87.87** | **26,960.00** |

(iii) ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಕಾಮಗಾರಿಯ ಹಂತ–1 ರಲ್ಲಿ, ಉತ್ತರ–ದಕ್ಷಿಣ ಕಾರಿಡಾರ್, ಸಂಪರ್ಕ ಕಾರಿಡಾರ್–1 (CC-1) ಹಾಗೂ ಸೆಂಟ್ರಲ್ ಬ್ಯುಸಿನೆಸ್ ಡಿಸ್ಟ್ರಿಕ್ಟ್ ಲೂಪ್ (CBD Loop) ಒಟ್ಟು 32.25 ಕಿಮೀ ಉದ್ದದ ಎಲಿವೇಟೆಡ್ ಕಾರಿಡಾರ್‌ನ್ನು ಎರಡು ಘಟ್ಟಗಳಲ್ಲಿ ಈ ಕೆಳಕಂಡಂತೆ ಅನುಷ್ಠಾನಗೊಳಿಸಲು–

ಅ) ಮೊದಲನೇ ಹಂತದ ಘಟ್ಟ–1ರಲ್ಲಿ ಬ್ಯಾಪ್ಟಿಸ್ಟ್ ಹಾಸ್ಪಟಲ್‌ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗಿನ 21.55 ಕಿಮೀ ಉದ್ದದ ಉತ್ತರ–ದಕ್ಷಿಣ ಕಾರಿಡಾರ್ ಕಾಮಗಾರಿಯನ್ನು ಅಂದಾಜು ಮೊತ್ತ ರೂ.6,855 ಕೋಟಿ (ರೂ.ಆರು ಸಾವಿರದ ಎಂಟುನೂರ ಐವತ್ತೈದು ಕೋಟಿಗಳು ಮಾತ್ರ) ಗಳಲ್ಲಿ 3 ಪ್ಯಾಕೇಜಿನಲ್ಲಿ 2019–20ನೇ ಸಾಲಿನಿಂದ ಅನುಷ್ಠಾನಗೊಳಿಸಲು;

ಮತ್ತು

ಆ) ಮೊದಲನೇ ಹಂತದ ಘಟ್ಟ–2ರಲ್ಲಿ 10.70 ಕಿಮೀ ಉದ್ದದ ಉತ್ತರ–ದಕ್ಷಿಣ ಕಾರಿಡಾರ್‌ನ ಅಂಗವಾದ ಸಂಪರ್ಕ ಕಾರಿಡಾರ್–1 (CC-1) ಮತ್ತು ಸೆಂಟ್ರಲ್ ಬ್ಯುಸಿನೆಸ್ ಡಿಸ್ಟ್ರಿಕ್ಟ್ (CBD Loop) ಲೂಪ್‌ನ ಎಲಿವೇಟೆಡ್ ಕಾರಿಡಾರ್ ಕಾಮಗಾರಿಯನ್ನು ಅಂದಾಜು ಮೊತ್ತ ರೂ.2,245 ಕೋಟಿ (ರೂ.ಎರಡು ಸಾವಿರದ ಇನ್ನೂರ ನಲವತ್ತೈದು ಕೋಟಿಗಳು ಮಾತ್ರ) ಗಳಲ್ಲಿ 2 ಪ್ಯಾಕೇಜ್‌ಗಳಲ್ಲಿ 2020–21ನೇ ಸಾಲಿನಿಂದ ಅನುಷ್ಠಾನಗೊಳಿಸಲು;

(iv) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು (MORTH) ಪ್ರಕಟಿಸಿರುವ ಮಾದರಿ ಬಿಡ್ಡಿಂಗ್ ದಾಖಲೆ ಆಧರಿಸಿ, EPC ಮಾದರಿಯಲ್ಲಿ ಹಂತ–01 ರ ಯೋಜನೆಗೆ ಟೆಂಡರ್ ಗಳನ್ನು ಆಹ್ವಾನಿಸಲು ಅನುಮೋದನೆ ನೀಡಲಾಗಿದೆ.

(v) ರಸ್ತೆ ಬಳಕೆದಾರರು ಸ್ವಂತ ವಾಹನಗಳಿಗಿಂತ ಸಾರ್ವಜನಿಕ ಸಾರಿಗೆಯನ್ನು ಬಳಸಲು ಉತ್ತೇಜಿಸುವ ಸಲುವಾಗಿ ಪ್ರಸ್ತಾಪಿಸಿರುವ ಎಲಿವೇಟೆಡ್ ಕಾರಿಡಾರ್ ನಲ್ಲಿ ಒಂದು ಪಥವನ್ನು Bus lane ಗೆ ಮೀಸಲಿಡುವ ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

(vi) ಕೆ.ಆರ್.ಡಿ.ಸಿ.ಎಲ್ ರವರು ವಿವಿಧ ಹಂತಗಳಲ್ಲಿ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವ ಪ್ರಸ್ತಾವನೆಗಳಿಗೆ ಆರ್ಥಿಕ ಇಲಾಖೆಯ ಸಹಮತಿ / ಅಭಿಪ್ರಾಯದೊಂದಿಗೆ ಪ್ರತ್ಯೇಕವಾಗಿ

ಪ್ರಸ್ತಾವನೆಗಳಿಗೆ ಸರ್ಕಾರದ ಅನುಮೋದನೆ ಪಡೆಯುವ ಷರತ್ತಿನೊಂದಿಗೆ ಉಳಿದ ಕಾರಿಡಾರ್ ಯೋಜನೆಗಳನ್ನು PPP- Hybrid Annuity ಮಾದರಿ ಅಥವಾ EPC ಮಾದರಿಯಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

(vii) ಯೋಜನೆಯನ್ನು ಅನುಷ್ಠಾನಗೊಳಿಸಲು ಕೆ.ಆರ್.ಡಿ.ಸಿ.ಎಲ್ ಗೆ ಆಯವ್ಯಯದ ನೆರವು ಮತ್ತು ಪ್ರತ್ಯೇಕ ಬ್ಯಾಂಕ್ ಖಾತೆ ನಿರ್ವಹಣೆ ಮಾಡಲು ಅನುಮೋದನೆ ನೀಡಲಾಗಿದೆ.

(viii) ಕೆಳಗೆ ಸೂಚಿಸಿರುವಂತೆ ಹಂತ-I ರ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರತಿ ವರ್ಷ ಆಯವ್ಯಯದಲ್ಲಿ ನೆರವು (ಭೂಸ್ವಾಧೀನ ಮತ್ತು ಸಾರ್ವಜನಿಕ ಸೌಲಭ್ಯಗಳ ಸ್ಥಳಾಂತರ ಸೇರಿದಂತೆ) ನೀಡಲು ಅನುಮೋದನೆ ನೀಡಲಾಗಿದೆ.

a) 2019-20 – ರೂ.2000 ಕೋಟಿ

b) 2020-21 – ರೂ.3600 ಕೋಟಿ

c) 2012-22 – ರೂ.3500 ಕೋಟಿ

(ix) ಭೂಸ್ವಾಧೀನ ಹಾಗೂ ಮನರ್‌ವಸತಿ ಮತ್ತು ಪುನರ್‌ಸ್ಥಾಪನೆಗಾಗಿ KIADB ಕಾಯ್ದೆಯನ್ನು BMRCLರವರು ನಮ್ಮ ಮೆಟ್ರೋ ಯೋಜನೆಗೆ ಅನುಸರಿಸುತ್ತಿರುವ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳನ್ನು ಈ ಯೋಜನೆಗೂ ಅಳವಡಿಸಲು ಅನುಮೋದನೆ ನೀಡಲಾಗಿದೆ.

(x) State Level Environmental Impact Assesment Authority (SEIAA) ರವರು ದಿನಾಂಕ:02-03-2019 ರಂದು ನಡೆದ ಸಭೆಯಲ್ಲಿ ಬೆಂಗಳೂರು ಮಹಾನಗರದಲ್ಲಿ ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣಕ್ಕೆ ಕೆಲವು ಷರತ್ತುಗಳೊಂದಿಗೆ ಪರಿಸರ ನಿರಾಕ್ಷೇಪಣಾ ಪತ್ರ (Environmental clearance) ನೀಡಲು ತೀರ್ಮಾನಿಸಿದ್ದು, ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸುವುದು.

(xi) ಈ ಯೋಜನೆಯ ಅನುಷ್ಠಾನವನ್ನು ಪರಿಶೀಲಿಸಲು ಹಾಗೂ ಯೋಜನೆಯ ಅನುಷ್ಠಾನಕ್ಕಾಗಿ ಅವಶ್ಯವಿರುವ ಅನುಮೋದನೆಗಳನ್ನು ನೀಡಲು, ಕೆಶಿಪ್ ಹಾಗೂ ಎಸ್.ಹೆಚ್.ಡಿ.ಪಿ ಯೋಜನೆಗಳಲ್ಲಿ ಇರುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಯೋಜನಾ ಆಡಳಿತ ಮಂಡಳಿಯ (Project Governing Board) ರಚನೆಗೆ ಅನುಮೋದನೆ ನೀಡಲಾಗಿದೆ.

(xii) ಹೆಬ್ಬಾಳ ಮೇಲ್ಸೇತುವೆಯ ಹೆಚ್ಚುವರಿ ಲೂಪನ್ನು ಬ್ಯಾಪ್ಟಿಸ್ಟ್ ಆಸ್ಪತ್ರೆಯ ಬಳಿ ಎಲಿವೇಟೆಡ್ ಕಾರಿಡಾರ್‌ಗೆ ವಿಲೀನಗೊಳಿಸಲು ಮತ್ತು ಉತ್ತರ-ದಕ್ಷಿಣ ಎಲಿವೇಟೆಡ್ ಕಾರಿಡಾರ್‌ನ್ನು ಮೇಖ್ರಿ ರಸ್ತೆಯಿಂದ ಕಾವೇರಿ ಜಂಕ್ಷನ್ ಕಡೆಗೆ 100 ಮೀಟರ್ ನಂತರ ಕೊನೆಗೊಳಿಸಲು ಹಾಗೂ ಇಲ್ಲಿಂದ ಮುಂದೆ ಬಿ.ಡಿ.ಎ.ರವರು ಬಸವೇಶ್ವರ ವೃತ್ತದಿಂದ ಹೆಬ್ಬಾಳ ಮೇಲ್ಸೇತುವೆವರೆಗೆ ನಿರ್ಮಿಸಲು ಉದ್ದೇಶಿಸಿರುವ ಮೇಲ್ಸೇತುವೆಯನ್ನು ಮೇಖ್ರಿ ವೃತ್ತದಿಂದ 100 ಮೀ.ನಲ್ಲಿ ವಿಲೀನಗೊಳಿಸಲು ಅನುಮೋದನೆ ನೀಡಲಾಗಿದೆ.

(xiii) ಬಿ.ಬಿ.ಎಂ.ಪಿ ನಿರ್ಮಿತ ರಿಚ್‌ಮಂಡ್ ವೃತ್ತದ ಮೇಲ್ಸೇತುವೆಗೆ ಪುನರ್ ಮಾದರಿ ತಯಾರಿಸಿ ಹಾಲಿ ಇರುವ ಶೂಲೆ ಸರ್ಕಲ್ ರ್‍ಯಾಂಪ್ ಮತ್ತು ಸೆಂಟ್-ಮಾರ್ಕ್ಸ್ ರಸ್ತೆ ರ್‍ಯಾಂಪ್‌ಗಳನ್ನು ತೆಗೆದು ಉತ್ತರ-ದಕ್ಷಿಣ ಕಾರಿಡಾರನ್ನು ವಿಲೀನಗೊಳಿಸಲು ಕೆ.ಆರ್.ಡಿ.ಸಿ.ಎಲ್ ಗೆ ಅನುಮೋದನೆ ನೀಡಲಾಗಿದೆ.

(xiv) ಕೆಆರ್‌ಡಿಸಿಎಲ್ ವತಿಯಿಂದ ಜೆ.ಸಿ. ರಸ್ತೆಯಲ್ಲಿ ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದ ವರೆಗೆ ಬಿಬಿಎಂಪಿ ಪ್ರಸ್ತಾಪಿತ ಎಲಿವೇಟೆಡ್ ರಸ್ತೆ ಬದಲಿಗೆ ಸಿಬಿಡಿ ಲೂಪ್‌ನ ಭಾಗವಾಗಿ ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ಅನುಮೋದನೆ ನೀಡಲಾಗಿದೆ.

(xv) ಎಲಿವೇಟೆಡ್ ಕಾರಿಡಾರ್ ಮತ್ತು ಸಂಪರ್ಕ ಕಾರಿಡಾರ್‌ಗಳ ನಿರ್ಮಾಣದ ಅವಧಿಯಲ್ಲಿ ಹಾಗೂ ನಿರ್ಮಾಣ ನಂತರ ವಾಹನ ಸಂಚಾರ ವ್ಯವಸ್ಥೆಯ ನಿರ್ವಹಣೆಗಾಗಿ ಯೋಜನೆ ರೂಪಿಸಲು ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯ ರಚನೆಗೆ ಅನುಮೋದನೆ ನೀಡಲಾಗಿದೆ.

(xvi) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ರೂಪಿಸಿದ ಮಾರ್ಗದರ್ಶನದಂತೆ ವಾಯುಪಡೆ, ರಕ್ಷಣಾ ಇಲಾಖೆ, ರೈಲ್ವೆ ಇಲಾಖೆ ಮತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರ ಸ್ವಾಮ್ಯದ ಇಲಾಖೆಗಳಿಗೆ ಅವರ ಜಮೀನನ್ನು ಹಸ್ತಾಂತರಿಸಿಕೊಳ್ಳಲು ವ್ಯವಹರಿಸಲು ಅನುಮೋದನೆ ನೀಡಲಾಗಿದೆ.

(xvii) ಮೆ॥ ಬಾಷ್ ಸಂಸ್ಥೆ, ಎನ್.ಡಿ.ಆರ್.ಐ. (NDRI) ಮತ್ತು ಎನ್.ಐ.ಎ.ಎನ್.ಪಿ (NIANP) ಸಂಸ್ಥೆಗಳೊಂದಿಗೆ ಯೋಜನೆಗೆ ಬೇಕಾಗಿರುವ ಜಮೀನನ್ನು ಪರಿಹಾರ ಅಥವಾ ಟಿ.ಡಿ.ಆರ್ ಆಧಾರದಲ್ಲಿ ಹಸ್ತಾಂತರಿಸಲು ವ್ಯವಹರಿಸಲು ಅನುಮೋದನೆ ನೀಡಲಾಗಿದೆ.

(xviii) ಯೋಜನೆಗೆ ಅವಶ್ಯವಿರುವ ಅರಮನೆ ಆವರಣದ ಜಮೀನನ್ನು ಪರಿಹಾರ ಅಥವಾ ಟಿ.ಡಿ.ಆರ್ ಆಧರಿಸಿ ಹಸ್ತಾಂತರಿಸಲು ಅರಮನೆ ಜಮೀನಿನ ವಾರಸುದಾರರು ಅಥವಾ ಭೋಗ್ಯದಾರರೊಂದಿಗೆ ವ್ಯವಹರಿಸಲು ಅನುಮತಿ ನೀಡಲಾಗಿದೆ.

(xix) ಹಡ್ಸನ್ ವೃತ್ತದಿಂದ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಶೇಷಾದ್ರಿ ರಸ್ತೆ, ಆನಂದರಾವ್ ವೃತ್ತ, ಕೆಂಪೇಗೌಡ ಬಸ್ ನಿಲ್ದಾಣ ((BMTC & KSRTC), ಸಂಗೊಳ್ಳಿರಾಯಣ್ಣ ವೃತ್ತ, ಓಕಳಿಪುರಂ ಆರ್.ಓ.ಬಿ. ಮೇಲೆ, ರಾಜಾಜಿನಗರ ಎಂಟ್ರೆನ್ಸ್ ಪ್ರದೇಶ, ದಾಸಾಶ್ರಮ ರಸ್ತೆ, ಮಾಗಡಿ ರಸ್ತೆ, ವಿಜಯನಗರ ಎಂಟ್ರೆನ್ಸ್, ಪ್ರಸನ್ನ ಟಾಕೀಸ್ ಮತ್ತು ಕಾಮಾಕ್ಷಿಪಾಳ್ಯದ ಬಳಿ ಪ್ರಸ್ತಾಪಿತ ಮೆಟ್ರೋಲೈನ್ ಜೊತೆ ವಿಲೀನಗೊಂಡು ಹೊರವರ್ತುಲ ರಸ್ತೆಯ ಸುಮನಹಳ್ಳಿ ವರೆಗೆ ಸಾರ್ವಜನಿಕ ಸಾರಿಗೆ ಸಂಸ್ಥೆಗಳಾದ ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ ಗಳಿಗೆ ಪ್ರತ್ಯೇಕ ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ಬಿ.ಎಂ.ಆರ್.ಸಿ.ಎಲ್. ರವರ ಸಮಾಲೋಚನೆಯೊಂದಿಗೆ ಕಾರ್ಯಸಾಧ್ಯತಾ ಅಧ್ಯಯನ ಕೈಗೊಳ್ಳಲು ತೆಗೆದುಕೊಳ್ಳಲು ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ. ಆಇ 149 ಆಕೋ–1/2019 ದಿನಾಂಕ 21–02–2019 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(signature) 2/3/19

**(ಪಿ.ಆರ್.ತಾರಾ)**
ವಿಶೇಷಾಧಿಕಾರಿ (ಇಎಪಿ)
ಬಾಹ್ಯ ಅನುದಾನಿತ ಯೋಜನೆಗಳು
ಲೋಕೋಪಯೋಗಿ, ಬಂ ಹಾಗೂ ಒಜಸಾಇ.

ಇವರಿಗೆ,
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಗಳು:

1) ಮಹಾಲೇಖಪಾಲರು (ಎ ಅಂಡ್ ಇ) ಕರ್ನಾಟಕ, ಬೆಂಗಳೂರು.
2) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ, ಬೆಂಗಳೂರು.
7) ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.
9) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
10) ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು.
11) ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಆರ್.ಸಿ.ಎಲ್, ಬೆಂಗಳೂರು.
12) ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಪೊಲೀಸ್.
13) ನಿರ್ದೇಶಕರು, ನಗರ ಸಾರಿಗೆ ಇಲಾಖೆ (DULT).
14) ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.
15) ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ (ಆರ್ಥಿಕ ಕೋಶ) ಲೋಕೋಪಯೋಗಿ ಇಲಾಖೆ, ಬೆಂಗಳೂರು.
16) ಸರ್ಕಾರದ ಉಪಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.
17) ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.
18) ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
20)ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
21)ಮಾನ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
20)ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ವಿಶೇಷ ಕರ್ತವ್ಯಾಧಿಕಾರಿ, ಸಚಿವ ಸಂಪುಟ ಶಾಖೆ, ಬೆಂಗಳೂರು.
21)ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
22)ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತ ಕಟ್ಟಡ (ದಕ್ಷಿಣ) ಬೆಂಗಳೂರು.
23)ಮುಖ್ಯ ಇಂಜಿನಿಯರ್, PRAMC, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
24)ಕಡತ / ಹೆಚ್ಚುವರಿ ಪ್ರತಿಗಳು.